ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1214 (1518)
2. ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 19-03-2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಮೆಟ್ರೋ ರೈಲು ಸಂಚಾರವನ್ನು ಯಾವಾಗ ಜಾರಿಗೆ ತರಲಾಯಿತು;	ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1 ನ್ನು ದಿನಾಂಕ: 20.10.2011 ರಲ್ಲಿ ಬೈಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆವರೆಗೆ 6.7 ಕಿ.ಮೀ.ಗಳ ಮಾರ್ಗವನ್ನು ಪ್ರಾರಂಭಿಸಲಾಯಿತು. ತದನಂತರ ಹಂತ-ಹಂತವಾಗಿ ರೀಚ್‌ಗಳನ್ನು ಪ್ರಾರಂಭಿಸುತ್ತಾ ಜೂನ್ 2017ಕ್ಕೆ ಪೂರ್ಣ ಮೆಟ್ರೋ ಜಾಲ 42.30 ಕಿ.ಮೀಗಳ ಸಂಚಾರವನ್ನು ಪ್ರಾರಂಭಿಸಲಾಯಿತು.
ಆ)	ಪ್ರಾರಂಭದಲ್ಲಿ ಮೆಟ್ರೋ ರೈಲು ಪ್ರಯಾಣಕ್ಕೆ ನಿಗಧಿಪಡಿಸಲಾಗಿದ್ದ ಮೊತ್ತವೆಷ್ಟು;	ಪ್ರಾರಂಭದಲ್ಲಿ ಮೆಟ್ರೋ ರೈಲು ಪ್ರಯಾಣಕ್ಕೆ ಪ್ರಾಯೋಗಿಕ ದರ 6.7 ಕಿ.ಮೀ.ದೂರಕ್ಕೆ ನಿಗಧಿಪಡಿಸಿದ ವಿವರ ಕೆಳಕಂಡಂತಿದೆ: ನಿಲ್ದಾಣ — ಮೊತ್ತ (ರೂ.ಗಳಲ್ಲಿ) ಬೈಯಪ್ಪನಹಳ್ಳಿ — 10.00 ಎಸ್.ವಿ.ರಸ್ತೆ — 10.00 ಇಂದಿರಾನಗರ — 12.00 ಹಲಸೂರು — 12.00 ಟ್ರಿನಿಟಿ — 14.00 ಎಂ.ಜಿ.ರಸ್ತೆ — 15.00
ಇ)	ಈವರೆಗೆ ಮೆಟ್ರೋ ರೈಲು ಪ್ರಯಾಣದ ದರವನ್ನು ಎಷ್ಟು ಬಾರಿ ಪರಿಷ್ಕರಿಸಲಾಗಿದೆ; ಪ್ರಸ್ತುತ ನಿಗಧಿಪಡಿಸಿರುವ ದರವೆಷ್ಟು; (ಕಾಲಕಾಲಕ್ಕೆ ಏರಿಸಲಾದ ದರದ ವಿವರ ನೀಡುವುದು)	ಬೆಂಗಳೂರು ಮೆಟ್ರೋ ರೈಲು ಪ್ರಾರಂಭದಲ್ಲಿ ಬೈಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆಯವರೆಗೆ 6.7 ಕಿ.ಮೀ.ಗಳು ಮಾತ್ರ ವಾಣಿಜ್ಯ ಸೇವೆಗೆ ಲಭ್ಯವಾಗಿತ್ತು. ಈ ಸಂದರ್ಭದಲ್ಲಿ ಪ್ರಯಾಣದ ದರವನ್ನು ಪ್ರಾಯೋಗಿಕ ದರಗಳ ಮೇಲೆ ನಿಗಧಿಪಡಿಸಲಾಗಿತ್ತು (ಕನಿಷ್ಠ ರೂ.10, ಗರಿಷ್ಠ ರೂ.15). ನಂತರ ಮೆಟ್ರೋ ಜಾಲವು 42.30 ಕಿ.ಮೀ.ಗಳು ಪೂರ್ಣಗೊಂಡಾಗ ತಜ್ಞರ ಸಮಿತಿ ಶಿಫಾರಸ್ಸಿನ ಮೇರೆಗೆ ಮಂಡಳಿಯಿಂದ ಅನುಮೋದನೆ ಪಡೆದು ದರಗಳನ್ನು ನಿಗಧಿಪಡಿಸಲಾಗಿತ್ತು. ಸದರಿ ದರಗಳ ಪ್ರತಿಯನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.
ಈ)	ಮೆಟ್ರೋ ರೈಲು ಪಾಸುದಾರರಿಗೆ ಪ್ರಾರಂಭದಲ್ಲಿ ನೀಡಲಾಗುತ್ತಿದ್ದ ರಿಯಾಯಿತಿ ಶೇಕಡಾವಾರು ದರವೆಷ್ಟು; ಪ್ರಸ್ತುತ ವಿಧಿಸಲಾಗುತ್ತಿರುವ ದರವೆಷ್ಟು;	ಮೆಟ್ರೋ ರೈಲು ಸ್ಮಾರ್ಟ್ ಕಾರ್ಡ್ ಮೂಲಕ ಪ್ರಯಾಣಿಕರಿಗೆ ಪ್ರಾರಂಭದಲ್ಲಿ ನೀಡಲಾಗುತ್ತಿದ್ದ ರಿಯಾಯಿತಿ ಶೇ.15%. ಪ್ರಸ್ತುತ ಮೆಟ್ರೋ ರೈಲು ಸ್ಮಾರ್ಟ್‌ಕಾರ್ಡ್ ಮೂಲಕ ಪ್ರಯಾಣಿಕರಿಗೆ ನೀಡಲಾಗುತ್ತಿರುವ ರಿಯಾಯಿತಿ ಶೇ.5%.

ಉ)	ನವದೆಹಲಿ, ಕೊಲ್ಕತ್ತ, ಜೈಪುರಗಳಿಗೆ ಹೋಲಿಸಿದಲ್ಲಿ ಬೆಂಗಳೂರು ಮೆಟ್ರೋ ವಿಧಿಸುತ್ತಿರುವ ದರವು ಅಧಿಕವಲ್ಲವೆ;	ಬೆಂಗಳೂರು ನಮ್ಮ ಮೆಟ್ರೋ ಪ್ರಯಾಣ ದರ ಚೆನ್ನೈ, ಮುಂಬೈ, ಕೊಚ್ಚಿ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಇರುತ್ತದೆ. **ಉದಾ:** 1. ನಮ್ಮ ಮೆಟ್ರೋ 24 ಕಿ.ಮೀ.ಗಳಿಗೆ ದರ ರೂ. 60/-. 2. ಚೆನ್ನೈ ಮೆಟ್ರೋ 24 ಕಿ.ಮೀ.ಗಳಿಗೆ ರೂ. 70/-. 3. ಮುಂಬೈ ಮೆಟ್ರೋ 11 ಕಿ.ಮೀ.ಗಳಿಗೆ ರೂ. 40/-. 4. ಕೊಚ್ಚಿ ಮೆಟ್ರೋ 22 ಕಿ.ಮೀ.ಗಳಿಗೆ ರೂ. 60/-. **ದೆಹಲಿ ಮೆಟ್ರೋ** ತನ್ನ ಕಾರ್ಯಾಚರಣೆಯನ್ನು 2002 ರಿಂದ ಪ್ರಾರಂಭಿಸಿತು ಮತ್ತು ಅವುಗಳ ಒಟ್ಟು ನೆಟ್‌ವರ್ಕ್ ಉದ್ದ 389 ಕಿ.ಮೀ. ದೊಡ್ಡ ನೆಟ್‌ವರ್ಕ್ ಮತ್ತು ಹೆಚ್ಚಿನ ಆದಾಯದ ಕಾರಣ ಬಿಎಂಆರ್‌ಸಿಎಲ್ ಗೆ ಹೋಲಿಸಿದರೆ ದೆಹಲಿ ಮೆಟ್ರೋ ದರವು ಕಡಿಮೆ ಇರುತ್ತದೆ. **ಕೊಲ್ಕತ್ತ ಮೆಟ್ರೋ**ವನ್ನು ಭಾರತೀಯ ರೈಲ್ವೆ ನಿರ್ವಹಿಸುತ್ತದೆ ಮತ್ತು ಅಂತಹ ಭಾರತೀಯ ರೈಲ್ವೆ ದರ ಪ್ರಕಾರ ನಿಗಧಿಪಡಿಸಲಾಗಿದೆ ಮತ್ತು ಇವುಗಳಿಗೆ ಸಬ್ಸಿಡಿ ನೀಡಲಾಗುತ್ತದೆ. **ಜೈಪುರ ಮೆಟ್ರೋ** ಕೇವಲ 9.6 ಕಿ.ಮೀ ದೂರ ಕಾರ್ಯ ನಿರ್ವಹಿಸುತ್ತಿದ್ದು, ಪ್ರಾಯೋಗಿಕ ದರಗಳಾಗಿರುತ್ತವೆ.
ಊ)	ಮೆಟ್ರೋ ರೈಲು ಪ್ರಾರಂಭವಾದ ನಂತರ ಗಳಿಸಿರುವ ಆದಾಯವೆಷ್ಟು; ನಿಗಮವು ಆದಾಯದಲ್ಲಿ ನಡೆಯುತ್ತಿದೆಯೇ; (ವರ್ಷವಾರು ವಿವರ ನೀಡುವುದು)	ಬೆಂಗಳೂರು ಮೆಟ್ರೋ ರೈಲು ಪ್ರಾರಂಭವಾದ ನಂತರ ಗಳಿಸಿರುವ ಆದಾಯದ ವಿವರಗಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆಯನ್ನು ವಿವಿಧ ವಿದೇಶಿ ಸಂಸ್ಥೆಗಳಿಂದ ಸಾಲ ಪಡೆದು ನಿರ್ಮಿಸಲಾಗಿರುತ್ತದೆ. ಸದರಿ ಸಾಲಕ್ಕೆ ಅಸಲು ಮತ್ತು ಬಡ್ಡಿ ಪಾವತಿಸುತ್ತಿರುವುದರಿಂದಾಗಿ ನಿಗಮವು ನಷ್ಟದಲ್ಲಿ ನಡೆಯುತ್ತಿದೆ.
ಋ)	ನಿಗಮವು ಆದಾಯದಲ್ಲಿದ್ದರೆ, ಪ್ರಯಾಣಿಕರ ಹಿತದೃಷ್ಟಿಯಿಂದ ಮೆಟ್ರೋ ರೈಲು ದರವನ್ನು ಇಳಿಸಲಾಗುವುದೆ;	ಮೆಟ್ರೋ ರೈಲು ನಿಗಮವು ನಷ್ಟದಲ್ಲಿರುವುದರಿಂದ ದರಗಳನ್ನು ಇಳಿಸುವ ಪ್ರಸ್ತಾವನೆ ಇರುವುದಿಲ್ಲ.
ಎ)	ಕೆ.ಎಸ್.ಆರ್.ಟಿ.ಸಿ., ಬಿ.ಎಂ.ಟಿ.ಸಿ ಮತ್ತು ರೈಲ್ವೇ ಇಲಾಖೆಯ ಹಿರಿಯ ನಾಗರೀಕರಿಗೆ ರಿಯಾರಿತಿ ದರ ನೀಡುತ್ತಿದ್ದು, ಅದೇ ರೀತಿ ರಿಯಾಯಿತಿ ನೀಡಲು ಮೆಟ್ರೋ ರೈಲು ನಿಗಮಕ್ಕೆ ಇರುವ ತೊಂದರೆಯಾದರೂ ಏನು?	ಬೆಂಗಳೂರು ಮೆಟ್ರೋ ರೈಲಿನಲ್ಲಿ ಸ್ಮಾರ್ಟ್‌ಕಾರ್ಡ್ ಮೂಲಕ ಸಂಚರಿಸುವ ಎಲ್ಲಾ ನಾಗರೀಕರಿಗೂ 5% ರಿಯಾಯಿತಿಯನ್ನು ನೀಡಲಾಗಿದೆ.

ಕಡತ ಸಂಖ್ಯೆ: ನಲಇ 80 ಪಿ.ಆರ್.ಜೆ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಅನುಬಂಧ-1

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಲೈನ್-1 ನಿಲ್ದಾಣಗಳು	ಮೊತ್ತ (ರೂ.ಗಳಲ್ಲಿ)	ಲೈನ್-2 ನಿಲ್ದಾಣಗಳು	ಮೊತ್ತ (ರೂ.ಗಳಲ್ಲಿ)
ಬೈಯಪ್ಪನಹಳ್ಳಿ	10.00	ನಾಗಸಂದ್ರ	10.00
ಸ್ವಾಮಿ ವಿವೇಕಾನಂದ ರಸ್ತೆ	10.00	ದಾಸರಹಳ್ಳಿ	10.00
ಇಂದಿರಾನಗರ	15.00	ಜಾಲಹಳ್ಳಿ	15.00
ಹಲಸೂರು	15.00	ಪೀಣ್ಯ ಕೈಗಾರಿಕಾ ಪ್ರದೇಶ	15.00
ಟ್ರಿನಿಟಿ	18.00	ಪೀಣ್ಯ	18.00
ಎಂ.ಜಿ. ರಸ್ತೆ	20.00	ಗೊರಗುಂಟೆಪಾಳ್ಯ	20.00
ಕಬ್ಬನ್ ಪಾರ್ಕ್	22.00	ಯಶವಂತಪುರ	22.00
ಡಾ॥ ಬಿ.ಆರ್. ಅಂಬೇಡ್ಕರ್, ವಿಧಾನ ಸೌಧ	25.00	ಸ್ಯಾಂಡಲ್ ಸೋಪ್ ಫ್ಯಾಕ್ಟರಿ	25.00
ಸರ್.ಎಂ. ವಿಶ್ವೇಶ್ವರಯ್ಯ, ಸೆಂಟ್ರಲ್ ಕಾಲೇಜ್	28.00	ಮಹಾಲಕ್ಷ್ಮಿ	28.00
ನಾಡ ಪ್ರಭು ಕೆಂಪೇಗೌಡ ನಿಲ್ದಾಣ, ಮೆಜೆಸ್ಟಿಕ್	30.00	ರಾಜಾಜಿನಗರ	30.00
ಕ್ರಾಂತಿವೀರ ಸಂಗೊಳ್ಳಿರಾಯಣ್ಣ ರೈಲು ನಿಲ್ದಾಣ	30.00	ಮಹಾಕವಿ ಕುವೆಂಪು ರಸ್ತೆ	30.00
ಮಾಗಡಿ ರಸ್ತೆ	35.00	ಶ್ರೀರಾಂಪುರ	35.00
ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ನಿಲ್ದಾಣ, ಹೊಸಹಳ್ಳಿ	35.00	ಮಂತ್ರಿ ಸ್ಕ್ವೇರ್, ಸಂಪಿಗೆ ರಸ್ತೆ	35.00
ವಿಜಯನಗರ	38.00	ಮೆಜೆಸ್ಟಿಕ್	38.00
ಅತ್ತಿಗುಪ್ಪೆ	40.00	ಚಿಕ್ಕಪೇಟೆ	40.00
ದೀಪಾಂಜಲಿ ನಗರ	42.00	ಕೆ.ಆರ್. ಮಾರುಕಟ್ಟೆ	42.00
ಮೈಸೂರು ರಸ್ತೆ	45.00	ನ್ಯಾಷನಲ್ ಕಾಲೇಜ್	45.00
		ಲಾಲ್‌ಬಾಗ್	45.00
		ಸೌತ್ ಎಂಡ್ ಸರ್ಕಲ್	50.00
		ಜಯನಗರ	50.00
		ಆರ್.ವಿ. ರಸ್ತೆ	52.00
		ಬನಶಂಕರಿ	55.00
		ಜೆ.ಪಿ. ನಗರ	58.00
		ಯಲಚೇನಹಳ್ಳಿ	60.00

ಮೆಟ್ರೋ ರೈಲು ಪ್ರಯಾಣದ ದರವನ್ನು ಇದುವರೆಗೂ ಪರಿಷ್ಕರಿಸಿರುವುದಿಲ್ಲ.

ಅನುಬಂಧ–2

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ									
ಆದಾಯ ಮತ್ತು ಲಾಭ / ನಷ್ಟ ವಿವರಗಳು									
(ರೂ. ಕೋಟಿಗಳಲ್ಲಿ)									
ಕ್ರ ಸಂ.	ವಿವರಗಳು	**2018-19**	**2017-18**	**2016-17**	**2015-16**	**2014-15**	**2013-14**	**2012-13**	**2011-12**
ಎ	ಒಟ್ಟು ಆದಾಯ	419.47	337.21	145.12	54.23	42.98	35.93	49.45	55.07
ಬಿ	ವೆಚ್ಚಗಳು	1,032.41	890.58	602.68	415.22	306.22	119.09	106.50	57.45
ಸಿ	ಲಾಭ /ನಷ್ಟ (ಎ–ಬಿ)	**-612.94**	**-553.37**	**-457.56**	**-360.99**	**-263.24**	**-83.16**	**-57.05**	**-2.38**
ಡಿ	ಸವಕಳಿ (ಡಿಪ್ರಿಸಿಯೇಷನ್)	583.94	515.79	364.21	244.59	196.49	64.04	59.11	24.99
ಇ	ನಗದು ಲಾಭ /ನಷ್ಟ (ಸಿ+ಡಿ)	**-29.00**	**-37.58**	**-93.35**	**-116.40**	**-66.75**	**-19.12**	**2.06**	**22.61**